**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರ ಮಧ್ಯಕಾಲೀನ ಅರ್ಜಿ ಸಂಖ್ಯೆ: 10 ರ ಮೇಲಿನ ಆದೇಶಃ**

ಪ್ರಸ್ತುತ ಅರ್ಜಿದಾರರು : ವಾದಿಯರು, ಪ್ರತಿವಾದಿಯರ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರಂತೆ ಸಲ್ಲಿಸಿ, ದಾವಾ 1ನೇ ಆಸ್ತಿಯಲ್ಲಿರುವ ಪಹಣಿಯಲ್ಲಿರುವಂತೆ ಮತ್ತು ಪ್ರತಿವಾದಿಯರ ವಿವಾದಿತ ಕ್ರಯಪತ್ರಗಳಂತೆ ಅಳತೆ ಮಾಡಿ, ನ್ಯಾಯಾಲಯಕ್ಕೆ ವರದಿ ತರಿಸಿಕೊಳ್ಳಲು ಸರ್ವೆಯರನ್ನು ನೇಮಕ ಮಾಡಬೇಕಾಗಿ ಕೋರಿರುತ್ತಾರೆ.

2. ಅರ್ಜಿದಾರರು ಃ ವಾದಿಯರು ಅರ್ಜಿಯೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಪ್ರಮಾಣ ಪತ್ರದಲ್ಲಿ ದಾವಾ 1ನೇ ಆಸ್ತಿಯಲ್ಲಿ 1ನೇ ಪ್ರತಿವಾದಿಯಿಂದ ಅಕ್ರಮವಾಗಿ ವಿವಾದಿತ ಕ್ರಯಪತ್ರಗಳನ್ನು ಸೃಷ್ಟಿನೆ ಮಾಡಿಕೊಂಡಿರುವುದಾಗಿ ವಾದಿಗೆ ಈಗ ತಿಳಿದು ಬಂದಿರುತ್ತದೆ. ಆದರೆ ಪ್ರತಿವಾದಿಗಳು ವಿವಾದಿತ ಜಾಗದಲ್ಲಿ ಕಟ್ಟಡ ವಗ್ಯೆರೆಗಳನ್ನು ಕಟ್ಟುವುದಾಗಿ ಹೇಳಿಕೊಂಡು ತಿರುಗಾಡುತ್ತಿರುತ್ತಾರೆ. ದಾವಾ ಆಸ್ತಿಯಲ್ಲಿ 1ನೇ ಪ್ರತಿವಾದಿಯ ಮತ್ತು ವಾದಿಯ ಹೆಸರಿಗೆ ಬಾಕಿ ವಿಸ್ತೀರ್ಣದ ಆಸ್ತಿಯು ಇರುತ್ತದೆ. ಆದ್ದರಿಂದ 1ನೇ ಆಸ್ತಿಯಲ್ಲಿ ಹಾಲಿ ಪಹಣಿಯಲ್ಲಿರುವಂತೆ ವಿಸ್ತೀರ್ಣಗಳನ್ನು ಅಳತೆ ಮಾಡಿ, ಚೆಕ್ಕುಬಂಧಿ ಸಹಿತ ವರದಿಯನ್ನು ತರಿಸಿಕೊಂಡು, ದಾವಾದ ಮುಂದಿನ ನಡವಳಿಕೆಯನ್ನು ನಡೆಸಬೇಕಾಗಿ ಕೋರಿರುತ್ತಾರೆ.

3. ಪ್ರತಿವಾದಿಗಳು ಆಕ್ಷೇಪಣೆಯನ್ನು ಸಲ್ಲಿಸಿ, ಮಧ್ಯಂತರ ಅರ್ಜಿ –10ರಲ್ಲಿ ಹೇಳಿರುವ ಪರಿಹಾರವನ್ನು ಮಂಜೂರು ಮಾಡಲು ಬರುವುದಿಲ್ಲ ಎಂಬ ನಿಲುವನ್ನು ತೆಗೆದುಕೊಂಡಿರುತ್ತಾರೆ. ಆದ್ದರಿಂದ ಸದರಿ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

4. ಉಭಯತ್ರರ ವಾದ ಪ್ರತಿವಾದವನ್ನು ಆಲಿಸಲಾಯಿತು.

5. ಅರ್ಜಿ ಮತ್ತು ಆಕ್ಷೇಪಣೆಯನ್ನು ಪರಿಶೀಲಿಸಿದ್ದೇನೆ ಮತ್ತು ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತೇನೆಃ

1. ಅರ್ಜಿದಾರರು ಃ ವಾದಿಯರು ಮಧ್ಯಂತರ ಅರ್ಜಿ-10ರಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ?
2. ಏನು ಆದೇಶ?

6. ಈ ಪ್ರಕರಣದ ಕಡತ ಮತ್ತು ವಾದಿಯರು ಸಲ್ಲಿಸಿದ ವಾದಪತ್ರ ಹಾಗೂ ಪ್ರತಿವಾದಿಯರ ಲಿಖಿತ ಹೇಳಿಕೆ ಹಾಗೂ ದಾಖಲೆಯನ್ನು ಪರಿಗಣಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆಃ

| | | | | |
|---|---|---|---|---|
| ಅಂಶ | - | 1 | ಃ | ಸಕಾರಾತ್ಮಕವಾಗಿ |
| ಅಂಶ | - | 2 | ಃ | ಅಂತಿಮ ಆದೇಶದಂತೆ ಈ |

ಕೆಳಕಂಡ ಕಾರಣಗಳಿಗಾಗಿ

**ಃಕಾರಣಗಳುಃ**

7. ಅಂಶ ಸಂಖ್ಯೆಃ1ಃ ಈ ದಾವಾವನ್ನು ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಲ್ಲಿ ವಾದಿಗಳಿಗೆ 1ಃ3 ಭಾಗದ ಹಿಸ್ಸೆಯ ಹಕ್ಕು ಇದೆ ಎಂಬ ಘೋಷಣೆ ಮತ್ತು ಪ್ರತ್ಯೇಕ ಸ್ವಾಧೀನ ಹಾಗೂ 2 ರಿಂದ 6ನೇ ಪ್ರತಿವಾದಿಗಳು ಮಾಡಿಸಿಕೊಂಡಿರುವ ವಿವಾದಿತ ಕ್ರಯಪತ್ರಗಳು ವಾದಿಯ ಹಿಸ್ಸೆಗೆ ಬದ್ಧಪಡುವುದಿಲ್ಲವೆಂಬ ತೀರ್ಮಾನಕ್ಕಾಗಿ ಕೋರಿ ಸಲ್ಲಿಸಿರುತ್ತಾರೆ. ವಾದಿಯರ ಪ್ರಕಾರ 1ನೇ ಪ್ರತಿವಾದಿಯು ವಾದಿಗಳಿಗೆ ತಂದೆಯಾಗಬೇಕು, 2ನೇ ಪ್ರತಿವಾದಿ ಶಾರದಮ್ಮ 1ನೇ ಪ್ರತಿವಾದಿಯ ಹೆಂಡತಿಯಾಗಬೇಕು ಹಾಗೂ 2 ರಿಂದ 4ನೇ ಪ್ರತಿವಾದಿಗಳಿಗೂ ಹಾಗೂ ದಾವಾ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರತಿವಾದಿಗಳು ತೆಗೆದುಕೊಂಡಿರುವ ಅಂಶಗಳನ್ನು ಪರಿಶೀಲಿಸಿದಾಗ, 1ನೇ ಪ್ರತಿವಾದಿ ಮತ್ತು ನಿಂಗಮ್ಮರವರು 2 ರಿಂದ 6ನೇ ಪ್ರತಿವಾದಿಯರಿಗೆ ದಾವಾ ಅಸ್ತಿಯಲ್ಲಿನ ಸ್ವಲ್ಪ ಸ್ವಲ್ಪ ಆಸ್ತಿಗಳನ್ನು ಮಾರಾಟ ಮಾಡಿರುವುದು ಆಕ್ಷೇಪಣೆಯಿಂದ ಕಂಡುಬರುತ್ತದೆ. ಅದೇ ರೀತಿ ವಾದಿಗಳು ಹಾಜರುಪಡಿಸಿರುವ ರೆವಿನ್ಯೂ ದಾಖಲೆಗಳಾದ ಪಹಣಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಪ್ರತಿವಾದಿ-2 ರಿಂದ 4 ರವರು ದಾವಾ 1ನೇ ಆಸ್ತಿಯಲ್ಲಿ ಸ್ವಲ್ಪ ಜಾಗವನ್ನು ಕ್ರಯಕ್ಕೆ ಪಡೆದುಕೊಂಡಿರುವುದಾಗಿ ಸದರಿ ಪಹಣಿಯಿಂದ ಕಂಡುಬರುತ್ತದೆ. ವಾದಿಯರ ಪ್ರಕಾರ ಇನ್ನು ವಾದಿಯರು, 1ನೇ ಪ್ರತಿವಾದಿಯ ಹೆಸರಿಗೆ ಮತ್ತು ಮೃತ ನಿಂಗಮ್ಮರವರ ಹೆಸರಿಗೆ 0-22 ಗುಂಟೆ ಆಸ್ತಿ ಇದ್ದು, ಸದರಿ ಆಸ್ತಿಯಲ್ಲಿ ಇತರ ಪ್ರತಿವಾದಿಗಳು ಕಟ್ಟಡ ಕಟ್ಟಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಇದರಿಂದ ವಾದಿಗಳಿಗೆ ಮತ್ತು 1ನೇ ಪ್ರತಿವಾದಿಗೆ ಹಾಗೂ ನಿಂಗಮ್ಮರವರಿಗೆ ಉಳಿದಿರುವ 0-22 ಗುಂಟೆ ಆಸ್ತಿಯನ್ನು ಮತ್ತು ಕ್ರಯಕ್ಕೆ ಪಡೆದುಕೊಂಡಿರುವ ಆಸ್ತಿಗಳನ್ನು ಪಹಣಿಯಂತೆ ಅಳತೆ ಮಾಡಿ, ಚೆಕ್ಕುಬಂಧಿಯನ್ನು ನಿಗದಿ ಮಾಡಿದಲ್ಲಿ ಈ ದಾವಾದಲ್ಲಿ ಕೇಳಿರುವ ಪರಿಹಾರಕ್ಕೆ ಪೂರಕವಾಗಿರುತ್ತದೆ ಎಂದು ವಾದಿಯರು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಪ್ರತಿವಾದಿಗಳು ಆಕ್ಷೇಪಣೆಯನ್ನು ಸಲ್ಲಿಸಿ, ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಲು ತಮ್ಮ ತಕರಾರು ಇದೆ ಎಂದು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಈ ದಾವಾದಲ್ಲಿ ವಾದಿಗಳು 1ಃ3 ಭಾಗದ ಹಿಸ್ಸೆಗಾಗಿ ದಾವಾ ಸಲ್ಲಿಸಿರುವುದರಿಂದ, ಪಹಣಿಯಲ್ಲಿ ಕಂಡುಬರುವಂತೆ ಈಗಾಗಲೇ ವಾದಿಗಳಿಗೆ ಮತ್ತು 1ನೇ ಪ್ರತಿವಾದಿ ಮತ್ತು ನಿಂಗಮ್ಮರವರಿಗೆ ದಾವಾ 1ನೇ ಆಸ್ತಿಯಲ್ಲಿ ಸ್ವಲ್ಪ ಸ್ವಲ್ಪ ವಿಸ್ತೀರ್ಣದ ಜಮೀನು ಇರುವುದಾಗಿ ಕಂಡುಬರುತ್ತದೆ. ದಾವಾ ಆಸ್ತಿಯನ್ನು 2 ರಿಂದ 4ನೇ ಪ್ರತಿವಾದಿಗಳು 1ನೇ ಪ್ರತಿವಾದಿ ಮತ್ತು ಮೃತ ನಿಂಗಮ್ಮರವರಿಂದ ಕ್ರಯಕ್ಕೆ ಪಡೆದಿರುವುದಾಗಿ ಪ್ರತಿವಾದಿಗಳು ತಿಳಿಸಿದ್ದು, ಸದರಿ ಅಂಶವನ್ನು ಸಹ ವಾದಿಯ ಪರ ವಕೀಲರು ಸ್ಪಷ್ಟವಾಗಿ ಒಪ್ಪಿಕೊಂಡಿರುತಾತ್ತಾರೆ. ಆದರೆ ದಾವಾ ಆಸ್ತಿಯಲ್ಲಿ ಇನ್ನು 0-22 ಗುಂಟೆ ವಾದಿಗಳು ಮತ್ತು 1ನೇ ಪ್ರತಿವಾದಿ ಮತ್ತು ಅವರ ಅಜ್ಜಿ ನಿಂಗಮ್ಮರವರ ಹೆಸರಿನಲ್ಲಿ ಪಹಣಿ ಇರುವುದರಿಂದ ಬಾಕಿ ಉಳಿದಿರುವ ವಿಸ್ತೀರ್ಣದಲ್ಲಿ ಪ್ರತಿವಾದಿಗಳು ಕಟ್ಟಡ ಕಟ್ಟಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ವಾದಿಗಳು ಹೇಳಿರುವಂತೆ ಪಹಣಿಯಲ್ಲಿ

ನಮೂದಿಸಿರುವ ವಿಸ್ತೀರ್ಣವನ್ನು ಮತ್ತು ಪ್ರತಿವಾದಿಗಳು ಕ್ರಯಕ್ಕೆ ಪಡೆದುಕೊಂಡಿರುವ ಆಸ್ತಿಗಳನ್ನು ಅಳತೆ ಮಾಡಿ, ಚೆಕ್ಕುಬಂಧಿ ನಿಗದಿಪಡಿಸಿದ್ದಲ್ಲಿ ಈ ದಾವಾದ ಅಂತಿಮ ತೀರ್ಮಾನಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ವಾದಿಗಳು ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ-10 ನ್ನು ಪುರಸ್ಕರಿಸಲು ಅರ್ಹವಾಗಿರುತ್ತದೆ. ಆದ ಕಾರಣ ಸದರಿ ಅಂಶವನ್ನು “ಸಕಾರಾತ್ಮಕ” ವಾಗಿ ಉತ್ತರಿಸಿದ್ದೇನೆ.

ಅಂಶ ಸಂಖ್ಯೆ:2:-

8. ಈ ಮೇಲ್ಕಂಡ ಅಂಶದಲ್ಲಿನ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತೇನೆ:

:ಆದೇಶ:

ವಾದಿಯರು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ-10 ನ್ನು ಪುರಸ್ಕರಿಸಲಾಗಿದೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಾಲಿ ಪಹಣಿಯಲ್ಲಿರುವ ವಿಸ್ತೀರ್ಣ ಹಾಗೂ ಪ್ರತಿವಾದಿಯರ ಕ್ರಯಪತ್ರದಲ್ಲಿರುವ ವಿಸ್ತೀರ್ಣವನ್ನು ಅಳತೆ ಮಾಡಿ, ಚೆಕ್ಕುಬಂಧಿಯನ್ನು ನಿಗದಿಪಡಿಸಿ, ವರದಿ ಸಲ್ಲಿಸುವ ಸಲುವಾಗಿ ನ್ಯಾಯಾಲಯದ ಆಯುಕ್ತರನ್ನಾಗಿ ತಾಲ್ಲೂಕು ಸರ್ವೆಯರ್‌ರವರನ್ನು ನೇಮಕ ಮಾಡಿ ಆದೇಶಿಸಿದೆ.

ನ್ಯಾಯಾಲಯದ ಆಯುಕ್ತರ ಶುಲ್ಕವನ್ನು ರೂ.1,000-00ಕ್ಕೆ ನಿಗದಿಪಡಿಸಿದೆ. ಸದರಿ ಶುಲ್ಕವನ್ನು ವಾದಿಯರು ಪಾವತಿಸತಕ್ಕದ್ದು.

ವಾದಿಯರು ಮತ್ತು ಪ್ರತಿವಾದಿಯರು ಮೆಮೋ ಆಫ್ ಇನ್‌ಸ್ಟ್ರಕ್ಷನ್‌ನ್ನು ಸದರಿ ಆದೇಶ ಆದ 7 ದಿನಗಳೊಳಗಾಗಿ ಕಚೇರಿಗೆ ಸಲ್ಲಿಸತಕ್ಕದ್ದು.

ಕಚೇರಿಯು ವಾದಿಯರು ನ್ಯಾಯಾಲಯದ ಆಯುಕ್ತರ ಶುಲ್ಕ ಹಾಗೂ ಪಿ.ಎಫ್.ನ್ನು ನ್ಯಾಯಾಲಯಕ್ಕೆ ಠೇವಣಿ ಇಟ್ಟ ನಂತರ ಕಮೀಷನರ್ ವಾರೆಂಟ್‌ನ್ನು ಹೊರಡಿಸತಕ್ಕದ್ದು.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನವನ್ನು ಕೊಟ್ಟು, ಪರಿಷ್ಕರಿಸಿ, ತಿದ್ದುಪಡಿ ಮಾಡಿ ದಿನಾಂಕ: 15ನೇ ಜುಲೈ 2019 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

(ನಾಗೇಶ ಪಿ.)
ಸಿವಿಲ್ ನ್ಯಾಯಾಧೀಶರು, ಬೇಲೂರು.